ಇಲ್ಲಿ ನಾವು ಸ್ವಡಿ ಮಾಡುತ್ತೇವೆ. ಮೊನ್ನೆ ಏನು ಕ್ರೈಮ್ ರೇಟ್ ಎಲ್ಲಾ ಆಗಿದೆ. ಜೀಪು ಎಲ್ಲಾ ಸುಟ್ಟಿದ್ದಾರೆ, ಮತ್ತು ಮರ್ಡರ್ ಆಗಿದೆ ಎಂದು ಹೇಳಿದ್ದಾರೆ. ಅದನ್ನೆಲ್ಲ ಎಕ್ಸಾಮಿನ್ ಮಾಡಿ ಅಲ್ಲಿ ಔಟ್‌ಪೋಸ್ಟ್ ಆಗಬೇಕಾಗಿದ್ದರೆ ನಾವು ಖಂಡಿತವಾಗಿಯೂ ಅದನ್ನು ಮಾಡುತ್ತೇನೆ.

ವಿಷಯ:- ಚಿಕ್ಕಮಗಳೂರು ನಗರದಲ್ಲಿ ಪೋಲೀಸ್ ಉಪ ಠಾಣೆ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 189 (1065)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಂಗಳೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಚಿಕ್ಕಮಗಳೂರು ನಗರದಲ್ಲಿನ ಗೃಹ ಮಂಡಳಿ ಬಡಾವಣೆಯಲ್ಲಿ ಒಂದು ಆರಕ್ಷಕ ಉಪ ಠಾಣೆ ಪ್ರಾರಂಭ ಮಾಡುವ ಬಗ್ಗೆ ಸರ್ಕಾರದವರಿಗೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ರೋಷನ್‌ಬೇಗ್ (ಗೃಹ ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಕ್ಷಮೆ ಕೋರುತ್ತಾ ನನ್ನ ಪ್ರಶ್ನೆಗಳಿಗೆ ಸಮಂಜಸವಾದಂಥ ಉತ್ತರಗಳನ್ನು ಒದಗಿಸಿಕೊಡುವ ಬಗ್ಗೆ ಸರ್ಕಾರದವರು ಏಕೆ ಈ ರೀತಿಯಾಗಿ ಮಾಡುತ್ತಾರೆ ಎಂದು ನನಗೆ ಗೊತ್ತಾಗುವುದಿಲ್ಲ. ನಾನು ಈ ಗೃಹಮಂಡಲಿ ವ್ಯಾಪ್ತಿಯಲ್ಲಿ ಒಂದು ಪೋಲೀಸ್ ಉಪಠಾಣೆ ಬೇಕು ಎನ್ನುವ ನನ್ನ ಪ್ರಸ್ತಾವನೆ ಎರಡು ವರ್ಷದಿಂದ ಈ ಸರ್ಕಾರ ಎದುರು ಇದೆ. ಉಪಠಾಣೆ ಪ್ರಾರಂಭ ಮಾಡುವ ಬಗ್ಗೆ ಹಿಂದಿನ ಗೃಹಸಚಿವರು ನೂರು ಪೋಲೀಸ್ ಠಾಣೆಗಳನ್ನು ಈ ರಾಜ್ಯದಲ್ಲಿ ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ತಮ್ಮ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಇವರು ಪ್ರಸ್ತಾವನೆಯೆ ಎದುರುಗಡೆ ಇಲ್ಲ ಎಂದರೆ ನಾನೇನು ಮಾಡಲಿ? ಏನು ಪ್ರಶ್ನೆ ಕೇಳುವುದಕ್ಕಾಗುತ್ತದೆ? ಜೊತೆಗೆ ಇವತ್ತು ಗೃಹಮಂಡಲಿಯವರು ಹೇಳುತ್ತಾರೆ, ಹೆಚ್ಚುಕಡಿಮೆ 800 ಮನೆಗಳನ್ನು ನಾವು ಅಲ್ಲಿ ನಿರ್ಮಿಸಿದ್ದೇವೆ. ಈಗ ಅಲ್ಲಿ ವಾಸಿಸುತ್ತಿರುವ ಜನರಿಗೆ ಬಹಳ ಸ್ತರದಲ್ಲಿ ತಾಪತ್ರಯಗಳು ಉಂಟಾಗಿವೆ. ಕಳ್ಳತನದ ಭಯ, ಜೊತೆಗೆ ಎರಡು ಮೂರು ಕಾಲೇಜುಗಳಿವೆ ಅಲ್ಲಿ. ತಾಂತ್ರಿಕ ವಿದ್ಯಾಸಂಸ್ಥೆ, ಎಐಟಿ ಕಾಲೇಜು ಇದೆ, ನಮ್ಮ ಗೌರ್ನಮೆಂಟ್ ಕಾಲೇಜು ಇದೆ, ಜೋಸೆಫ್ ವಿದ್ಯಾರ್ಥಿಗಳ ಪ್ರೌಢ ಶಾಲೆಗಳು ಇವೆ. ಜೊತೆಗೆ ಆ ಬಡಾವಣೆಯ ನಾಗರೀಕರು ಈ ಮನೆಗಳಲ್ಲಿ ವಾಸವಿದ್ದು ಹೆಚ್ಚಿನ ಜನಸಂಖ್ಯೆಯಲ್ಲಿ ಜನರು ಅಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿ ಸಾರ್ವಜನಿಕರ ಪರವಾಗಿ ಬೇಡಿಕೆ ಇಟ್ಟಿರುವಂತಹದು ಸರ್ಕಾರದ

ಗಮನಕ್ಕೆ ತಂದಿದ್ದೇವೆ. ಅವರು ಇದರ ಪ್ರಸ್ತಾವನೆಯೇ ಸರ್ಕಾರದ ಮುಂದಿಲ್ಲ ಎಂದು ಹೇಳಿದರೆ ತಮ್ಮ ಆದೇಶವನ್ನು ಪಾಲಿಸುವಂತೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ರೋಶನ್ ಬೇಗ್:- ಮಾನ್ಯ ಸಭಾಧ್ಯಕ್ಷರೆ, ಮಾನ ಸದಸ್ಯರಾದ ಶ್ರೀ ಸಗೀರ್ ಅಹಮದ್ ಅವರು ಕೇಳಿರುವುದು ಔಟ್ ಪೋಸ್ಟ್. ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಚಿಕ್ಕಮಗಳೂರು ಟೌನ್ ಪೋಲೀಸ್ ಸ್ಟೇಷನ್ ಇದೆ. ಬಸವನಹಳ್ಳಿ ಪೋಲೀಸ್ ಸ್ಟೇಷನ್ ಇದೆ, ರೂರಲ್ ಪೋಲೀಸ್ ಸ್ಟೇಷನ್ ಇದೆ. ಇದರ ಜೊತೆಗೆ ಅವರ ವಾದ ಏನು ಎಂದರೆ ಅಲ್ಲಿ 800 ಮನೆಗಳು ಇವೆ, ಅಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕಾಗುತ್ತದೆ ಎಂದು ಹೇಳುತ್ತಿರುವುದು. There is a proposal before the Government to start a new police station called New Extension Police Station in Chickmagalur. ಆ ನ್ಯೂ ಪೋಲೀಸ್ ಸ್ಟೇಷನ್ ಲಿಮಿಟ್ಸ್‌ನಲ್ಲಿ ಈ 800 ಮನೆಗಳೆಲ್ಲಾ ಬರುತ್ತವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

MR.SPEAKER:- Problem is solved.

ವಿಷಯ:- ವಿವಿಧ ಇಲಾಖೆಗಳ ನಡುವಣ ಸಮನ್ವಯದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 190 (738)

ಶ್ರೀ ಎನ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದಲ್ಲಿ ನಗರಪಾಲಿಕೆ ದೂರ ಸಂಪರ್ಕ ಇಲಾಖೆ, ವಿದ್ಯುಚ್ಛಕ್ತಿ ಮಂಡಳಿ, ಜಲಮಂಡಳಿಗಳ ನಡುವೆ ಹೊಂದಾಣಿಕೆ ಇಲ್ಲದೆ, ನಗರದ ರಸ್ತೆಗಳು ಪಾದಚಾರಿ ಮಾರ್ಗಗಳು ಹದಗೆಟ್ಟ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಸ್ತೆಯನ್ನು ಕತ್ತರಿಸಿ ಸರಿಯಾಗಿ ಮುಚ್ಚದೆ ಇರುವುದರಿಂದ ವಾಹನಗಳು ಚಲಿಸಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) ಬೆಂ.ಮ.ಪಾಲಿಕೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಕ.ವಿ.ಮಂಡಳಿ, ಜಲಮಂಡಳಿ,